

ಡಾ.ವಿನೋದ ಛೆಬ್ಬಿ

'ಎಲ್ಲರೂ ಬಟ್ಟೆಯೊಳಗೆ ಬೆತ್ತಲೆಯೇ' ಎನ್ನುವುದನ್ನು ಬಯಲಿಗೆ ತಂದು ಅನುಭವಿಸುವುದು ಹೇಗಿರುತ್ತದೆ?

# 286: ಹೊಸ ದಾರಿ - 26

ಯಾವುದೇ ಹಿತಸ್ಪರ್ಶಕ್ಕೂ ಕಾಮದ ಅರ್ಥಹಚ್ಚುವ ಸಾಮಾನ್ಯ ಮನೋಭಾವದ ಬಗೆಗೆ ಮಾತಾಡುತ್ತ ಕಾಮ–ಪ್ರಣಯಗಳ ಜಾಗದಲ್ಲಿ ವಾತ್ಸಲ್ಯ ಭಾವವನ್ನು ತರುವುದರ ಬಗೆಗೆ ಹೋದಸಲ ಚರ್ಚಿಸಿದೆವು. ಅದನ್ನು ಅನ್ವಯಿಸುವಾಗ ನಗ್ನತೆಯ ವಿಷಯ ಬಂತು. ಈ ಸಲ ನಗ್ನತೆಯ ಬಗೆಗೆ ಮಾತಾಡೋಣ. ಸಂದರ್ಭ: ರಾತ್ರಿ ಹತ್ತೂವರೆ. ಮನೋಜ ಮಾಯಾ ಹಾಸಿಗೆ ಸೇರುತ್ತಿದ್ದಾರೆ. ಮೈಗಳು ಆಕಸ್ಮಿಕವಾಗಿಯೋ ಎನ್ನುವಂತೆ ಪರಸ್ಪರ ಸ್ಪರ್ಶಿಸುತ್ತವೆ. ದೇಹಗಳು ಸಂಕೇತ ವಿನಿಮಯ ಮಾಡಿಕೊಳ್ಳುತ್ತವೆ. ಕ್ರಮೇಣ ಬಟ್ಟೆ ತೆಗೆದು ಬಯಲಾಗುತ್ತವೆ. ಅರೆಗತ್ತಲಲ್ಲಿ ತೆಕ್ಕೆಬಿದ್ದು ಒಂದರೊಳಗೊಂದು ಸೇರುತ್ತವೆ. ನಂತರ ಬಚ್ಚಲಿಗೆ ಹೋಗಿಬಂದು ಮತ್ತೆ ಬಟ್ಟೆಗಳಲ್ಲಿ ಮರೆಯಾಗುತ್ತವೆ.

ಇದರಲ್ಲೇನು ವಿಶೇಷ? ಏನೂ ವಿಶೇಷ ಇಲ್ಲದಿರುವುದೇ ವಿಶೇಷ. ಇದೇನೆಂದು ವಿವರಿಸುತ್ತೇನೆ. ಮಾಯಾ ಮನೋಜ್ ಕಾಮಕೂಟದ ಮುಂಚೆ ಬಟ್ಟೆ ಧರಿಸಿದ್ದವರು, ಕಾಮಕೂಟದ ನಂತರ ಮತ್ತೆ ಧರಿಸಿದ್ದಾರೆ. ನಾವೆಲ್ಲರೂ ಹೆಚ್ಚಿನಂಶ ಹೀಗೆಯೇ ಮಾಡುತ್ತೇವೆ. ಸ್ನಾನ ಹಾಗೂ ಕೂಟ ಇವೆರಡು ಸಂದರ್ಭಗಳನ್ನು ಬಿಟ್ಟು ಉಳಿದಂತೆ ಬಟ್ಟೆ ಧರಿಸಿಯೇ ಇರುತ್ತೇವೆ – ಕೆಲವೊಮ್ಮೆ ಸಂಭೋಗದಲ್ಲೂ ಎಷ್ಟು ಬೇಕೋ ಅಷ್ಟು ಮಾತ್ರ ತೆರೆದಿರುತ್ತೇವೆ. ಉಡುಪುಗಳ ಮೇಲೆ ನಮ್ಮ ಅವಲಂಬನೆಯು ಎಷ್ಟಿದೆ ಎಂದರೆ, ಅವು ವಾತಾವರಣದಿಂದ ರಕ್ಷಿಸುವುದು ಒತ್ತಟ್ಟಿಗಿರಲಿ, ಲಿಂಗೀಯತೆಯನ್ನೂ ದಯಪಾಲಿಸುತ್ತವೆ (ಉದಾ. ಸೀರೆಯುಟ್ಟವರು ಹೆಂಗಸರು)! ನನ್ನ ಪ್ರಶ್ನೆ ಏನೆಂದರೆ, ಬೆತ್ತಲೆಯಾಗಿರುವ ಮಗುವು ನಮ್ಮ ಮೈಮೇಲೆ ಬೀಳುವಾಗ ಸಹಜವಾಗಿ ತೆಗೆದುಕೊಳ್ಳುವ ನಾವು ದೊಡ್ಡವರಾಗುತ್ತ ಏನನ್ನು ಮುಚ್ಚಿಡಲು ಹವಣಿಸುತ್ತೇವೆ? ಪ್ರಕೃತಿದತ್ತ ಮೈಯನ್ನು ('ಎಲ್ಲರೂ ಬಟ್ಟೆಯೊಳಗೆ ಬೆತ್ತಲೆಯೇ' ಎನ್ನುವ ಮಹಾತ್ಮರ ನುಡಿ ನೆನಪಾಗುತ್ತಿದೆ.) ನಿರ್ಮಿತ ಬಟ್ಟೆಗಳಿಂದ ಮುಚ್ಚಿಕೊಳ್ಳುವ ಉದ್ದೇಶವೇನು? ಆಕಾರವೇ, ಲಿಂಗೀಯತೆಯೆ, ಅಥವಾ ಲಜ್ಜೆಯೆ? ವಸ್ತ್ರಗಳ ಹಿಂದಿರುವ ನಮ್ಮ ಮನೋಭಾವದ ಬಗೆಗೆ, ಹಾಗೂ ವಸ್ತ್ರಗಳಿಂದ ನಾವೇನು ಕಳೆದುಕೊಳ್ಳುತ್ತಿದ್ದೇವೆ ಎಂದು ನೋಡೋಣ.

ಆದಿಮಾನವರು ಜನನಾಂಗಗಳನ್ನು ಮುಚ್ಚಿಕೊಳ್ಳುವ ರೂಢಿಯು ಮರೆಮಾಚುವುದಕ್ಕಲ್ಲ, ಹೊರತಾಗಿ ಮುಚ್ಚಿರುವುದರ ಹಿಂದಿರುವ ವಿಶೇಷತೆಗೆ ಗಮನ ಸೆಳೆಯುವುದೆಂದು ಮಾನವಶಾಸ್ತ್ರ ತಿಳಿಸುತ್ತದೆ. ಆದರೆ ಆಧುನಿಕತೆಯಲ್ಲಿ ಮೈತುಂಬ ಬಟ್ಟೆ ಧರಿಸುವುದರ ಉದ್ದೇಶವೇ ಬೇರೆ. ಅಭಿರುಚಿ ಹಾಗೂ ಸಿರಿವಂತಿಕೆಗಳನ್ನು ಮೆರೆಸುವುದನ್ನು ಬಿಟ್ಟರೆ ಹೆಚ್ಚಿನಂಶ ತನ್ನ ಬೆತ್ತಲೆ ಶರೀರ ಇತರರಿಗೆ ಇಷ್ಟವಾಗಲಿಕ್ಕಿಲ್ಲ ಎಂದಿರಬಹುದು ಎಂದೆನಿಸುತ್ತದೆ. ಅದಕ್ಕೆಂದೇ ಕೆಲವರಿಗೆ ಬೆಳಕಿನಲ್ಲಿ ಸಂಭೋಗ ಇಷ್ಟವಾಗುವುದಿಲ್ಲ. ಅಥವಾ ಸದಾ ಬೆತ್ತಲೆಯಾಗಿದ್ದರೆ ಸಂಗಾತಿಯ ಮುಂದೆ ಆಕರ್ಷಣೆ ಕಳೆದುಕೊಳ್ಳಬಹುದು ಎಂದೂ ಇರಬಹುದು. ಹಾಗಾಗಿ ಕಾಮುಕತೆಯ ಇಂಗಿತವಿಲ್ಲದೆ ಮೈ ತೆರೆಯಲು ಹೆಚ್ಚಿನವರಿಗೆ ಮನಸ್ಸು ಬರುವುದಿಲ್ಲ. ವಿಚಿತ್ರವೆಂದರೆ ಬಟ್ಟೆಗಳ ಹಿಂದೆ ಕಾಮುಕತೆಯನ್ನು ಅಡಗಿಸುವ ನಾವು ಬಟ್ಟೆಗಳ ಮೂಲಕವೇ ಕಾಮುಕತೆಯನ್ನು ವ್ಯಕ್ತಪಡಿಸುತ್ತೇವೆ – ನಾನಾ ವಿನ್ಯಾಸಗಳ ಬ್ರಾ, ಚಡ್ಡಿಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಅರೆನಗ್ನ ನೃತ್ಯಗಳು ಮಾದರಿಯ ಉದಾಹರಣೆ – ಇಲ್ಲಿ ಕಾಣುವುದಕ್ಕಿಂತಲೂ ಕಾಣದಿರುವುದು ಮುಖ್ಯವಾಗುತ್ತ, ಅದನ್ನು ಕಲ್ಪನೆಯ ಕಣ್ಣಲ್ಲಿ ಕಾಣಲು ನೋಡುವುದು ಮಹತ್ವದ ಅಂಶವಾಗುತ್ತದೆ. ಹೀಗೆ, ಬಟ್ಟೆ ತೆರೆದರೆ ಕಾಮುಕತೆ ಎನ್ನುವ ನಂಬಿಕೆಗೆ ಪಕ್ಕಾಗಿ ಹೋಗಿದ್ದೇವೆ. ಆದರೆ ನಗ್ನತೆಗೆ ಕಾಮಬಿಟ್ಟು ಬೇರೆ ಅನಿಸಿಕೆಗಳೂ ಸಾಧ್ಯವಿದೆ. ನಗ್ನ ಶಿಶುವಿನ ಮುಗ್ಧತೆ, ನಗ್ನ ಸನ್ಯಾಸಿಯ ವೈರಾಗ್ಯ, ನಗ್ನ ರೋಗಿಯ ದೈನ್ಯತೆ ಇಂಥದ್ದರಲ್ಲಿ ಕಾಮಭಾವ ಜಾಗೃತವಾಗುವುದಿಲ್ಲ! ಜ್ವರಬಂದ ಸಂಗಾತಿಯ ಮೈಯನ್ನು ಒದ್ದೆಬಟ್ಟೆಯಿಂದ ಒರೆಸುವಾಗ ಕಾಮೋದ್ರೇಕ ಆಗಲಿಕ್ಕಿಲ್ಲ. ಹಾಗೆಯೇ, ಕುಟುಂಬವಿಡೀ ಬೆತ್ತಲೆಯಾಗಿ ಸ್ನಾನ ಮಾಡುವ, ತಾಯಿಯು ಪೂರ್ತಿ ನಗ್ನಳಾಗಿ ಸ್ತನ್ಯಪಾನ ಮಾಡಿಸುವ ಚಿತ್ರಗಳು ಕಾಮಭಾವದ ಸೋಂಕಿಲ್ಲದೆ ಕಣ್ಮನಗಳನ್ನು ಸೆಳೆಯುತ್ತವೆ.

ಅದು ಸರಿ, ನಗ್ನತೆಯ ಬಗೆಗೆ ದಾಂಪತ್ಯದಲ್ಲಿ ಇಷ್ಟೊಂದು ಯಾಕೆ ಮಾತಾಡುತ್ತಿದ್ದೇನೆ? ಕಾರಣ ನನ್ನದೊಂದು ಸವಾಲಿದೆ: ಸಂಗಾತಿಗಳು ಕಾಮಕ್ಕಾಗಿ ಬೆತ್ತಲೆ ಆಗುವುದನ್ನು ಬದಿಗಿಟ್ಟು, ತಮ್ಮೊಳಗೆ ಸುಪ್ತವಾಗಿರುವ ನಗ್ನಭಾವವನ್ನು ಬಯಲಿಗೆ ತಂದರೆ ಹೇಗಿರುತ್ತದೆ? ಹೀಗೆ ಯೋಚಿಸುವುದಕ್ಕೆ ಹಿನ್ನೆಲೆಯಿದೆ. ನಮ್ಮ ಶರೀರದ ಅತಿದೊಡ್ಡ ಅಂಗಸಂಸ್ಥೆ ಯಾವುದು ಗೊತ್ತೆ? ನಮ್ಮ ಚರ್ಮ. ಇದು ಸುಮಾರು ಇಪ್ಪತ್ತೆರಡು ಚದರಡಿ ವಿಸ್ತಾರವಾಗಿದ್ದು ಎಲ್ಲೆಡೆಯೂ ಸ್ಪರ್ಶದ ನರತಂತುಗಳನ್ನು ಹೊಂದಿದೆ. ಕಾಮಕೂಟದಲ್ಲಿ ಸ್ಪರ್ಶದ್ದೇ ಸಾಮ್ರಾಜ್ಯ. ಚರ್ಮಕೊಡುವ ಸಂವೇದನೆಗಳ ಪೂರ್ತಿ ಅನುಭವವು ಸಾಮಾನ್ಯ ಕಾಮಕೂಟದಲ್ಲಿ ಆಗುವುದಿಲ್ಲ – ಯಾಕೆಂದರೆ ಆಗ ಕಾಮತೃಪ್ತಿಯ ಗುರಿ ಮುಟ್ಟುವುದು ಮುಖ್ಯವಾಗಿರುತ್ತದೆ. ಹಾಗಾಗಿ, ತನ್ನ ಹಾಗೂ ಸಂಗಾತಿಯ ಶಾರೀರಿಕ ಸಂವೇದನೆಗಳ ಅನುಭವವನ್ನು ಪೂರ್ಣಪ್ರಮಾಣದಲ್ಲಿ ಪಡೆಯಬೇಕಾದರೆ ಕಾಮಾಪೇಕ್ಷೆಯನ್ನು ಬದಿಗಿಡಬೇಕಾಗುತ್ತದೆ. ಹೀಗೆ ಮಾಡುವುದರಲ್ಲಿ ಹಲವು ಪ್ರಯೋಜನಗಳಿವೆ: ಒಂದು: ಶರೀರವು ವಾತಾವರಣದ ಏರಿಳಿತಗಳಿಗೆ ತೆರೆಯುವಾಗ ಆಗುವ ಸ್ಪರ್ಶ ಹಿತಕರ ಆಗಿರುತ್ತದೆ – ಹುಲ್ಲುಗಾವಲಿನಲ್ಲಿ ಬರಿಗಾಲಿನಿಂದ ನಡೆದಂತೆ. ಎರಡು: ಸಂಗಾತಿಯೊಡನೆ ಅನ್ಯೋನ್ಯತೆ ಬೆಳೆಸಲು ಮನವನ್ನು ತೆರೆದಂತೆ ತನುವನ್ನೂ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಮೂರು: ಮಾನವರ ದೃಷ್ಟಿ ಕೂಡ ಪರಸ್ಪರರನ್ನು ಆಕರ್ಷಣೆಯಿಂದ ಗಮನಿಸುವುದರಲ್ಲಿ ಮಹತ್ವದ ಸ್ಥಾನ ಪಡೆದಿದೆ.

ತನ್ನ ಹಾಗೂ ಸಂಗಾತಿಯ ಶರೀರಗಳನ್ನು ದೀರ್ಘಕಾಲ ವೀಕ್ಷಿಸುತ್ತಿದ್ದರೆ ಹೇಗಿರಬಹುದು? ಇದರಲ್ಲಿ ಸಹಜತೆಯಿದೆ. ಪಾರದರ್ಶಕತೆ ಇದೆ. ಮುಚ್ಚುಮರೆಯಿಲ್ಲದ 'ಇದು ನಾನು' ಎನ್ನುವ ಸ್ಪಷ್ಟ ಭಾವವಿದೆ. ಕಾಮಕೂಟಕ್ಕೆ ಹೊರತಾದ ಇಂಥ ನಗ್ನತೆಯಲ್ಲಿ ಹೆಚ್ಚಿನ ಸಮಯ ಕಳೆಯುವಾಗ ಅವರಲ್ಲಿ ಸ್ಫುರಿಸುವ ಭಾವನೆಗಳೇ ಬೇರೆಯಾಗುತ್ತವೆ. ಕಾಮಸುಖಕ್ಕೋಸ್ಕರ ಸಂಗಾತಿಯನ್ನು ಹಪಹಪಿಸುವುದು ಕಡಿಮೆಯಾಗುತ್ತದೆ. ಸಂಗಾತಿಯು ಹೇಗಿದ್ದಾರೋ ಹಾಗೆ (ಉದಾ. ಡೊಳ್ಳುಹೊಟ್ಟೆ, ಇಳಿಬಿದ್ದ ಸ್ತನಗಳು) ಅವರನ್ನು ವೀಕ್ಷಿಸುವ, ಒಪ್ಪಿಕೊಳ್ಳುವ ಹಾಗೂ ಸ್ಪರ್ಶಿಸುವ ಬಯಕೆ ಉಂಟಾಗುತ್ತದೆ. ಆಗ ಇಬ್ಬರಲ್ಲೂ ನಡೆಯುವ ಮೌನ ಸಂಭಾಷಣೆ, ಪದಗಳಿಲ್ಲದ ಸಂದೇಶಗಳ ರವಾನೆ, ವಿಸ್ಮಯ ಭರಿತ ಕುತೂಹಲದ ನೋಟ ಇವೆಲ್ಲ ಎಲ್ಲಾ ನಡೆಯುತ್ತಾ ಇಬ್ಬರಲ್ಲೂ ಹೊಸ ರೀತಿಯ ಆಕರ್ಷಣೆ ಹಾಗೂ ಬಾಂಧವ್ಯ ಬೆಳೆಯುತ್ತದೆ.

**ಪ್ರಯೋಗ 21:** ನಗ್ನವಾಗಿ ಕಾಲ ಕಳೆಯುವುದರ ಬಗೆಗೆ ಸಂಗಾತಿಯೊಡನೆ ಮಾತಾಡಿಕೊಳ್ಳಿ. ನಂತರ ಮನೆಯಲ್ಲಿ ಇಬ್ಬರೇ ಇರುವ ಹೆಚ್ಚಿನ ಸಮಯವನ್ನು ಬೆತ್ತಲೆಯಾಗಿ ಇರಲು ಯತ್ನಿಸಿ. ಪೂರ್ತಿ ಆಗದಿದ್ದಲ್ಲಿ ಒಳವುಡುಪು ಮಾತ್ರ ಧರಿಸಬಹುದು. ಇದಕ್ಕಾಗಿ ಕೆಲವು ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯವಾಗಬಹುದು (ಕಿಟಕಿಗಳಿಗೆ ಪರದೆ). ಅದಾಗದಿದ್ದಲ್ಲಿ ಮಲಗುವ ಕೋಣೆಯಲ್ಲಿ ಇರುವಷ್ಟು ಕಾಲ ನಗ್ನರಾಗಿ ಇರಬಹುದು. ಇದು ನಿಮ್ಮಲ್ಲಿ ಹಾಗೂ ಸಂಗಾತಿಯಲ್ಲಿ ಯಾವ ಭಾವನೆಗಳನ್ನು ಕೆರಳಿಸಬಹುದು ಎಂದು ನೋಡಿ. ಹಾಗೆಯೇ, ಮನೆಯೊಳಗೆ ನಗ್ನರಾಗಿ ತಿರುಗುತ್ತಿರುವಾಗ ಹಾಗೂ ಕೆಲಸದಲ್ಲಿರುವಾಗ ನಿಮ್ಮ ಶರೀರದ ಆಕಾರ ಹಾಗೂ ಅಲ್ಲಾಟಗಳನ್ನು ಕುತೂಹಲದಿಂದ ಗಮನಿಸಿ.

ವಾರದ ಪ್ರಶ್ನೆಗಳು: ನಗ್ನತೆಯ ಬಗೆಗೆ ಬರೆದಿರುವುದು ನಿಮಗೆ ಬೇಸರ, ಅಸಹ್ಯ ಅಥವಾ ನಾಚಿಕೆಗೇಡು ಎನಿಸುತ್ತದೆಯೇ? ಈ ಪರಿಕಲ್ಪನೆ ಎಲ್ಲಿಂದ ಬರುತ್ತದೆ ಎಂದು ಯೋಚಿಸಿ. ಸಹಜವಾಗಿರುವ ನಗ್ನತೆಯನ್ನು ಉಡುಪಿನಿಂದ ಬಚ್ಚಿಡುವ, ಹಾಗೂ ಅದನ್ನು ಕಾಮಕೂಟಕ್ಕೆ ಮಾತ್ರ ಮೀಸಲಾಗಿಡುವ ನಿಮ್ಮ ಮನೋಭಾವದ ಬಗೆಗೆ ಆತ್ಮ ವಿಮರ್ಶೆ ಮಾಡಿಕೊಳ್ಳಿ. ಬೇಕಾದರೆ ನನ್ನೊಡನೆಯೂ ಹಂಚಿಕೊಳ್ಳಿ.

**ಸಂಪರ್ಕಕ್ಕೆ: 8494933888; Email: vinod.chebbi@gmail.com**